ಮಾತು ಬಯಸಿದ್ದ ಕಮಲಿಗೆ ಇದು ಇನ್ನಷ್ಟು ತೀವ್ರವಾಗಿ ನೊಂದುಕೊಳ್ಳುವಂತೆ ಮಾಡಿತು. ಕಾಯ ಮಾತ್ರ ಅಸಹಾಯಕನಾಗಿ ನೋಡುತ್ತಲೇ ಇದ್ದ. ಯಾರೂ ಮಾತನಾಡಿಸದಾಗ ಕಮಲಿ ಅಳುತ್ತಾ ಎದ್ದು ಒಳನಡೆದಳು. ಕಾಯ ಕುಳಿತಲ್ಲೇ ಚಡಪಡಿಸಲಾರಂಭಿಸಿದ್ದ.

ಅಧ್ಯಾಯ – 11

ಕಮಲಿಯ ಕಣ್ಣೀರು, ನೋವು ಕಾಯನ ಹೃದಯ ಆರ್ದ್ರಗೊಳಿಸಿದ್ದು ಸುಳ್ಳಲ್ಲ. ಅವಳ ಹಿನ್ನೆಲೆ ಕೇಳಿ ಅರಿವಿದ್ದ ಅವನಿಗೆ ಅವಳಲ್ಲಿ ಅಂಥ ಒಂದು ಭಾವನೆ ಮೂಡಿದ್ದು ಸ್ವಾಭಾವಿಕವೇ ಅನ್ನಿಸಿತ್ತು. ಜೀವನದಲ್ಲಿ ಬರೀ ನೋವನ್ನೇ ಉಂಡ ಕಮಲಿಯ ಮನಸ್ಸು ದ್ರವಿಸಿ ಹೋಗಿರುವುದ ನೆನೆದು ಕಾಯನ ಮನಸ್ಸೂ ಕದಡಿಹೋಗಿತ್ತು.

ಸ್ವಲ್ಪ ಹೊತ್ತು ಎಲ್ಲರೂ ಮಾತನಾಡಿಕೊಂಡಿದ್ದು ಅವರವರ ಮನೆಯೊಳಗೆ ಹೋಗಿ ಕದವಿಕ್ಕಿಕೊಂಡರು. ಕಾಯ ಎಷ್ಟೋ ಹೊತ್ತು ನಿದ್ದೆಯಿಲ್ಲದೇ ಹೊರಳಾಡಿದ. ದೇಹಕ್ಕೆ ವಿಶ್ರಾಂತಿ ದೊರೆತರೂ ಮನಸ್ಸಿಗೆ ಮಾತ್ರ ದೊರೆತಿರಲಿಲ್ಲ. ಅದಂತೂ ಚಕ್ರಗಳನ್ನು ಕಟ್ಟಿಕೊಂಡಂತೆ, ಜಾರುಗುಪ್ಪೆಯಲ್ಲಿ ಜಾರಿ ಹೋದಂತೇ ಮುಂದಕ್ಕೆ ಧಾವಿಸುತ್ತಲೇ ಇತ್ತು. ಪಾಂಡುವಿಗೆ ಮದ್ದಿನ ಪರಿಣಾಮ, ಉಂಡು ಬೇಗ ಮಲಗಿ ಬಿಟ್ಟಿದ್ದ. ಅವನನ್ನು ಹೋಗಿ ನೋಡಬೇಕೆನ್ನುವ ತೀವ್ರತೆ ಮೂಡಿದರೂ ತನ್ನನ್ನು ತಾನು ನಿಯಂತ್ರಿಸಿಕೊಂಡ. ಹೊರಗೆ ನೀರವ ಕತ್ತಲು, ಗಾಳಿಯ ಹಿನ್ನೆಲೆಯಿಂದ ಕೇಳಿ ಬರುವ ಕೀಟಗಳ ಸದ್ದು, ಮೇಲೆ ಬಾನಿನಲ್ಲಿ ಅರ್ಧಾಕಾರದ ಚಂದಿರ, ಅವನು ಸೂಸುವ ಬೆಳಕು ಎಲ್ಲಿಂದಲೋ ತುಂಡರಿಸಿ ಬಿದ್ದಂಥ ತಾನು.. ಕಾಯನಿಗೆ ಎಲ್ಲವೂ ಅಯೋಮಯವೆನಿಸಿತ್ತು. ಹಾಗೆ ನೋಡಿದರೆ ಎಲ್ಲವೂ ಪ್ರಕೃತಿಯ ಭಾಗಗಳೇ..! ಆದರೆ ಮನುಷ್ಯ ಮಾತ್ರ ತಾನೊಂದು ಬೇರೆ, ಬುದ್ಧಿಜೀವಿ ಎಂದೋ ಭಿನ್ನವೆಂದೋ ಪರಿಗಣಿಸಿಕೊಳ್ಳುತ್ತಾನೆ.. ಮತ್ತೂ ಸೂಕ್ಷ್ಮವಾಗಿ ಗಮನಿಸಿದರೆ.. ಅವಾವುದೂ ಇಲ್ಲವಾದರೆ ಮನುಷ್ಯನ ಅಸ್ತಿತ್ವಕ್ಕೆ ಬೆಲೆಯೇ ಇರುತ್ತಿರಲಿಲ್ಲವೇನೋ..!

ಕಾಯ ಕುಳಿತಲ್ಲೇ ನೋಡುತ್ತಿರುವಂತೆಯೇ ಶಿವಯ್ಯನ ಮನೆಯ ಕದ ತೆರೆದುಕೊಂಡಿತು. ಹೊರ ಬಂದ ಆಕೃತಿ ಕಮಲಿಯದ್ದು ಎಂದು ಅರಿವಾಗಲು ಕಾಯನಿಗೆ ತಡವಾಗಲಿಲ್ಲ. ಅವನು ಗೋಡೆಗೆ ಒರಗಿಕೊಂಡು ನೋಡುತ್ತಿದ್ದವನು, ಹಾಗೇ ಉಸಿರು ಬಿಗಿ ಹಿಡಿದುಕೊಂಡು ಕುಳಿತಲ್ಲಿಂದ ಅಡ್ಡಾದ. ಕಣ್ಮುಚ್ಚಿ ನಿದ್ರಿಸಿದವನಂತೆ ನಟಿಸಿದ. ಕಮಲಿಯ ಹೆಜ್ಜೆಗಳು ಇವನ ಮನೆಯತ್ತವೇ ನಡೆದು ಬಂದವು. ಅವಳು ಕಂಕುಳಲ್ಲಿದ್ದ ಪಾಂಡುವನ್ನು ಕಾಯನ ಪಕ್ಕದಲ್ಲಿ ಮಲಗಿಸಿದಳು. ಅವಳು ತೀರಾ ಸಮೀಪದಲ್ಲಿದ್ದು ಅವನಿಗೆ ಭಾಸವಾಗುತ್ತಿತ್ತು. ಅವನು ಸ್ವಲ್ಪವೇ ಕಣ್ಣು ತೆರೆದು ಅವಳೇನು ಮಾಡುತ್ತಿರುವಳೆಂದು ನೋಡಲು ಯತ್ನಿಸಿದ. ಕಮಲಿ ಪಾಂಡುವಿನ ತಲೆಗೂದಲನ್ನು ಸವರಿ, ಬಾಗಿ ಅವನ ಹಣೆಗೆ ಮುತ್ತಿಟ್ಟಳು. ಅವನ ಮೈದಡವಿ ಹಿಂದೆ ಸರಿದು ಕೆಲವು ಕ್ಷಣಗಳು ನೋಡುತ್ತ ನಿಂತವಳು ಹೊರಗೆ ಕತ್ತಲಲ್ಲಿ ನಡೆಯ ತೊಡಗಿದಳು. ಕಾಯನಿಗೆ ಏಕೋ ಹೃದಯ ಅಪಶಂಕೆಯಿಂದ ಹೊಡೆದುಕೊಳ್ಳತೊಡಗಿತು. ಅವಳು ಈ ಹೊತ್ತಿನಲ್ಲಿ ಮಗುವನ್ನು ತಂದು ಮಲಗಿಸಿ ಹೋದ ರೀತಿಗೆ ಏಕೋ ಮನಸ್ಸು ಅವಳ ನಿರ್ಧಾರದ ಬಗ್ಗೆ ಏನೋ ಅನುಮಾನ ಮೂಡಿ ಅವನೆದ್ದು ಸದ್ದಿಲ್ಲದಂತೆ ಅವಳ ಹಿಂದೆ ಹೆಜ್ಜೆಹಾಕತೊಡಗಿದ.

ಕಮಲಿ ಭಾರವಾದ ಹೆಜ್ಜೆಗಳನ್ನು ಹಾಕುತ್ತಾ ಶಿವಯ್ಯನ ಮನೆಯನ್ನು ದಾಟಿ ಮುಂದೆ ನಡೆಯ ತೊಡಗಿದಾಗ ಕಾಯನಿಗೆ ತನ್ನ ಅನುಮಾನ ದೃಢವಾದಂತೆನಿಸಿತು. ಅವಳ ಹೆಜ್ಜೆಗಳು ಕುಮುದಿನಿಯ ಕಡೆಗೆ ಸಾಗುತ್ತಿದ್ದವು. ಅವಳ ನಿರ್ಧಾರ ಅವನಿಗೆ ಹೊಳೆದಿತ್ತು. ಅವಳು ಬಿರುಸಾಗಿ ನಡೆದು ಕುಮುದಿನಿಯ ತೀರದಲ್ಲಿ ನಿಂತು ನೀಳವಾಗಿ ಉಸಿರೆಳೆದುಕೊಂಡಳು. ಕಣ್ಮುಚ್ಚಿ ಹಿಡಿದು ಮನಸು ಗಟ್ಟಿ ಮಾಡಿಕೊಂಡಳು. ಇನ್ನೇನು ನೀರಿಗಿಳಿಯಬೇಕು ಎನ್ನುವ ಹೊತ್ತಿಗೆ ಕಾಯ ಅವಳನ್ನು ಸಮೀಪಿಸಿ ಅವಳ ಕೈ ಹಿಡಿದು ತಡೆದ.

'ಇದೆಂಥ ಕೆಲಸ ಮಾಡುತ್ತಿದ್ದೀ ಕಮಲಿ..? ಪಾಂಡುವನ್ನು ಬಿಟ್ಟು ಹೋಗುತ್ತಿದ್ದೀಯಾ..?'

'ಅವನಿಗೆ ನೀನಿದ್ದೀಯಲ್ಲ..ಯೋಗಿ..' ರತ್ನ ಹಾಗೆ ಕರೆಯುತ್ತಿದ್ದರಿಂದ ಅವನ ನಿಜವಾದ ಹೆಸರು ಅದೇ ಎಂದು ಕಮಲಿ ಭಾವಿಸಿದ್ದಳು. ಅದಕ್ಕೆ ನಿನ್ನ ಹತ್ರ ಬಿಟ್ಟು ಬಂದಿದೀನಿ..

'ನಾನಾ..? ಮತ್ತೆ ನೀನು..?' ಅವಳ ಬಳಿ ಉತ್ತರವಿರಲಿಲ್ಲ. ಎರಡು ಕೈಗಳಿಂದ ಮುಖ ಮುಚ್ಚಿಕೊಂಡು ಜೋರಾಗಿ ಬಿಕ್ಕಳಿಸಿದಳು.

ಕುಮುದಿನಿ ದುಃಖದ ರೂಪದಲ್ಲಿ ಅವಳೆದೆಯಲ್ಲಿ ಭೋರ್ಗರೆದಳು.

'ಹುಟ್ಟಿದಾಗಲಿಂದ ನೋವೇ ನನಗೆ.. ಅಪ್ಪ ಅಪ್ಪ ತೀರಿಕೊಂಡರು.. ನಂತರ ಅಕ್ಕನ ಹೆಗಲಿನ ಮೇಲೆ ನನ್ನ ಭಾರ.. ಅಲ್ಲಿನ ಹಂಗು ತೀರಿತೆಂದು ಗಂಡನ ಮನೆಗೆ ಹೋದರೆ ಅವನು ಅರ್ಥವಾಗುವ ಮುಂಚೆನೇ ಸತ್ತು ಹೋದ.. ಮಗು ಹುಟ್ಟಿದರೂ ಗಂಡನ ಮನೆಯ ಗುಲಾಮಗಿರಿಯಲ್ಲಿ ಅವನನ್ನು ಎತ್ತಿಕೊಳ್ಳಲೂ ಆಗುತ್ತಿರಲಿಲ್ಲ.. ಅಲ್ಲೂ ತಿನ್ನುವ ಅನ್ನಕ್ಕೆ ನೂರೆಂಟು ಹಂಗಿನ ಮಾತು.. ಇಲ್ಲಿ ಪುನಃ ಇವರ ಹಂಗಿನಡಿಯಲ್ಲಿ ಬದುಕು.. ಇಲ್ಲೂ ಸುಖವಿಲ್ಲ.. ಪಾಪ ವೀರಭದ್ರ ಸತ್ತ.. ನನ್ನ ಕಾಲುಗುಣವೇ ಸರಿಯಿಲ್ಲವೇನೋ.. ಇದ್ದಲ್ಲಿ, ಹೋದಲ್ಲಿ ಬರೀ ನೋವೇ ಬದುಕಾಯಿತು.. ನನ್ನಿಂದ ಯಾರಿಗೂ ಸುಖವಿಲ್ಲ.. ಅದಿಕ್ಕೇ..'




**ಮೊಬೈಲ್**

ನಾರದರ ಕೈಯಲ್ಲಿ
ಸದಾ ತಂಬೂರಿ
ನರಲೋಕದ ನಾರಿಯರ ಕೈಯಲ್ಲಿ
ಸದಾ ಮೊಬೈಲ್ ರೀ!

– ಎ. ಕೆ. ಪಟ್ಟಾಭಿ

'ಅದಿಕ್ಕೇ ಹೀಗೆ ಪ್ರಾಣ ಕಳೆದುಕೊಳ್ಳುವುದಾ..? ಪರಿಹಾರ ಸಿಕ್ಕಿಬಿಟ್ಟಿತಾ..? ನೋವು ಯಾರಿಗಿಲ್ಲಾ ಹೇಳಿ ಕಮಲಿ..? ಜೀವನ ಅಂದ ಮೇಲೆ ಅದೊಂದು ಭಾಗವೇ.. ನಾಣ್ಯದ ಎರಡು ಮುಖದ ಹಾಗೆ ನೋವು ಮತ್ತು ನಲಿವು.. ಎಲ್ಲರೂ ತಂತಮ್ಮ ನೋವೇ ಹೆಚ್ಚು ಎಂದು ಭಾವಿಸಿ ತಮ್ಮ ಅನುಕಂಪದ ಕೂಪದಲ್ಲೇ ಮುಳುಗಿ ಬಿಡುತ್ತಾರೆ.. ನಿಮಗಿಂತ ನನ್ನ ಕತೆ ಭಿನ್ನವೇನಲ್ಲ.. ನಾವಿಬ್ಬರೂ ಒಂದೇ ದೋಣಿಯ ಪಯಣಿಗರು.. ನಾನೂ ನನ್ನ ಹೆಂಡತಿಯನ್ನು ಕಳೆದುಕೊಂಡವನು.. ಜೊತೆಗೆ ನನ್ನ ಗಂಡು ಮಗನನ್ನು ಸಹ.. ಅವನ ಮೃತದೇಹ ಕಿ.ಮೀ ಗಟ್ಟಲೆ ಇದೇ ಕೈಗಳಲ್ಲಿ ಹೊತ್ತು ಅಲೆದಿದ್ದೇನೆ.. ಆ ಹೊರೆ ಇನ್ನೂ ನನ್ನ ಹೃದಯದಿಂದ ಕೆಳಗೆ ಇಳಿದಿಲ್ಲ.. ಆದರೂ ಬದುಕುತ್ತಿದ್ದೇನೆ.. ನನ್ನ ವೈರಾಗ್ಯದಿಂದಲೇ ಇಲ್ಲಿ ಕಾಡಿಗೆ ಬಂದೆ.. ಆಮೇಲೆ ಒಬ್ಬೊಬ್ಬರಾಗಿ ನನ್ನ ಜೊತೆ ಸೇರಿಕೊಂಡರು.. ಆತ್ಮಾಹುತಿಗಾಗಿಯೇ ಬಂದೆ.. ಇನ್ನೂ ಬದುಕುತ್ತಿದ್ದೇನೆ.. ಇವತ್ತು ನಿಮ್ಮ ತಡೆಯುವ ನೈತಿಕತೆ ನನಗೆ ಇದೆಯೋ ಇಲ್ಲವೋ ನನಗೆ ಗೊತ್ತಿಲ್ಲ.. ಅದೇ ನಿರ್ಧಾರ ಒಂದು ಕಾಲದಲ್ಲಿ ನನ್ನ ಮನದಲ್ಲೂ ಇತ್ತು.. ಬದುಕು ಸಾಕು ಅನ್ನಿಸಿಬಿಟ್ಟಿತ್ತು.. ಇವತ್ತು ನಿಮ್ಮ ನಿರ್ಧಾರ ನೋಡಿದಾಗ ಆವತ್ತು ನನ್ನ ನಿರ್ಧಾರವೂ ತಪ್ಪು ಅನ್ನಿಸಿತ್ತು.. ಕಾಲ ಎಲ್ಲವನ್ನೂ ಮಾಗಿಸುತ್ತದೆ ಕಮಲಿ..' ಕಾಯನ ಮಾತುಗಳು ಅವಳ ಮೇಲೆ ಯಾವ ಪ್ರಭಾವವೂ ಬಿದ್ದಂತೆ ಕಾಣಲಿಲ್ಲ.

'ನಾನು ಬದುಕಿ ಇನ್ನೊಬ್ಬರಿಗೆ ಹೊರೆಯೇ ಆಗಬೇಕು..ಅಷ್ಟೇ.. ನನ್ನಿಂದ ಯಾವ ಪ್ರಯೋಜನವೂ ಇಲ್ಲ..'

'ರತ್ನಕ್ಕ ಹಾಗೇನೂ ಅಂದಿಲ್ಲವಲ್ಲ.. ಮತ್ತೆ ನೀವೇ ಹಾಗೆ ಊಹಿಸಿ ಯಾಕೆ ಕೊರಗಬೇಕು..?'

'ಭಾವನಿಗೂ ಬದುಕು ಭಾರವಾಗಿದೆ.. ಮಗನನ್ನು ಕಳೆದು ಇಬ್ಬರೂ ಜೀವನದಲ್ಲಿ ಉತ್ಸಾಹ ಕಳೆದುಕೊಂಡಿದ್ದಾರೆ.. ಅವರಿಗೆ ತಮ್ಮ ಬದುಕೇ ಭಾರವೆನಿಸಿದಾಗ.. ನನಗೆ ಅಲ್ಲಿರಲು ಕಷ್ಟ ಆಗುತ್ತಿದೆ..'

ಕಾಯನಿಗೆ ಅವಳ ಪರಿಸ್ಥಿತಿ ಅರ್ಥವಾಗಿತ್ತು. ಅವಳ ನೋವು ಅವನ ಹೃದಯ ಸೋಕಿತ್ತು. ಆ ಕ್ಷಣಕ್ಕೆ ಅವನಿಗೆ ಅವಳ ನೋವು ತನ್ನದೆನಿಸಿತ್ತು.

'ನೀವು ಒಪ್ಪುವುದಾದರೆ.. ನಾವಿಬ್ಬರೂ ಮದುವೆ ಆಗಬಹುದು.. ಜಂಪಣ್ಣ ಆ ದಿನ ಪ್ರಸ್ತಾಪ ಇಟ್ಟಾಗ ನನ್ಗೆ ಬೇಡವೆನಿಸಿತ್ತು.. ಆದರೆ.. ಇವತ್ತು ನಿಮ್ಮ ನೋವು, ಪರಿಸ್ಥಿತಿ ನೋಡಿದಾಗ.. ನಾವಿಬ್ಬರೂ ಸಮಾನ ದುಃಖಿಗಳು ಅನಿಸಿತು.. ಪಾಂಡುವನ್ನು ನನ್ನ ಮಗ ಸಾರಂಗನಂತೇ ಸ್ವೀಕರಿಸುವೆ.. ನಾವು ಬೇರೆ ಮನೆ ಮಾಡಿ ಹೊಸತಾಗಿ ಬದುಕು ಆರಂಭಿಸೋಣ.. ನೀವು ಒಪ್ಪಿದರೆ ಮಾತ್ರ..'

(ಸಶೇಷ)